The House met in the Assembly Chamber, Vidhana Soudha, at One of the Clock.

MADAM SPEAKER [SMT. K. S. NAGARATHNAMMA] in the Chair.

STARRED QUESTIONS

(to which oral answers were given)

Amalgamation of M.S.C.M. Federation and M.S.A.I. Corporation

118. **Sri B. G. BANAKAR** (Hirekerur).—

Will the Minister for Co-operation be pleased to state ;—

(*a*) whether the Government is aware that the objects and functions of (1) the Mysore state Co-operative Marketing Federation Ltd., Bangalore and its affiliated Taluka Agricultural Produce Co-operative Marketing Societies in the State and (2) the Agro-Industries Corporation and its agents in the State are one and the same in nature :

(*b*) whether the Government is also aware that these two parallel institutions are running under loss ;

(*c*) the nature of measures the Government proposes to take for proper and effective functioning of these institutions without incurring loss ;

(*d*) whether the Government intend to amalgamate these two institutions ?

Sri A. SHANKARA ALVA (Minister for Co-operation).—

(*a*) Yes, so far as the procurement and distribution of fertilisers is concerned.

(*b*) The M.S.C.M. Federation Ltd., Bangalore had sustained loss but it has since been earning profits.

The M. S. Agro-Industries Corporation, Bangalore, has not been running under loss.

(SRI A. SHANKARA ALVA)

(c) So far as the M.S.C.M. Federation is concerned it has minimised the losses in fertiliser business by introducing the system of cash and carry basis and thereby reducing the payment of interest in the borrowings.

In respect of Mysore State Agro-Industries Corporation this question does not arise.

(d) No.

ಶ್ರೀ ಬಿ. ಜಿ. ಬಣಕಾರ್.—ರಾಜ್ಯದಲ್ಲಿ ರಾಜ್ಯದ ಸಹಕಾರಿ ಮಾರಾಟ ಸಂಘ, ತಾಲ್ಲೂಕು ಸಹಕಾರಿ ಮಾರಾಟ ಸಂಘ, ಹಾಗೂ ಗ್ರಾಮೀಣ ಸಹಕಾರಿ ಸಂಘಗಳಿಗೆ ಉತ್ಪಾದನೆಯಾದ ಸಿಬ್ಬಂದಿ ಹಾಗೂ ಗೋಡೌನ್‌ಗಳು ಇರುವುದರಿಂದ, ಗೊಬ್ಬರ ಮತ್ತು ಬೀಜ ಹಂಚುವ ಕೆಲಸಗಳನ್ನು ಸಂಪೂರ್ಣವಾಗಿ ಇಡೀ ರಾಜ್ಯದಲ್ಲಿ ಇವರ ಅಂಗ ಸಂಸ್ಥೆಗಳಿಗೆ ಕೊಡಬೇಕೆಂದೂ ಮತ್ತು ಈ ಒಂದು ವ್ಯವಹಾರ ಕಾರ್ಯವನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನಿಂದ ಮಾಡಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

†ಶ್ರೀ ಎ. ಶಂಕರ ಆಳ್ವ.-ಈಗ ಗೊಬ್ಬರವನ್ನು ಆಗ್ರೋ ಇಂಡಸ್ಟ್ರೀಸ್ ಮತ್ತು ಮಾರ್ಕೆಟಿಂಗ್ ಫೆಡರೇಷನ್ನಿನವರು ಅರ್ಧರ್ಧ ವಿತರಣೆ ಮಾಡುತ್ತಿದ್ದಾರೆ,

ಶ್ರೀ ಬಿ. ಜಿ. ಬಣಕಾರ್.—ರಾಜ್ಯದಲ್ಲಿ ತ್ರಿ ಟೈರ್ ಸಿಸ್ಟಂ ಇದ್ದುದು ಒಳ್ಳೆಯದಲ್ಲವೇ ? ಈಗ ಎರಡು ಟೈಯರ್ ಸಿಸ್ಟಂ ಮಾಡಿದ್ದೀರಿ. ಅದನ್ನು ತೆಗೆದು ಆದಷ್ಟು ಜಾಗ್ರತೆಯಾಗಿ ತ್ರಿ ಟೈರ್ ಸಿಸ್ಟಂ ಮೊದಲನಂತೆ ಜಾತಿಯಲ್ಲಿರುವಂತೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಅದನ್ನು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ರಾಮೇ ಗೌಡ.—ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಗೊಬ್ಬರದ ವ್ಯಾಪಾರವನ್ನು ವಹಿಸುವ ಉದ್ದೇಶವೇನು ?

ಶ್ರೀ ಎ. ಶಂಕರ ಆಳ್ವ.—ಸದ್ಯದಲ್ಲಿ ಸ್ವಲ್ಪ ಸಮಯವಿದ್ದುದರಿಂದ ಅರ್ಧ ಭಾಗವನ್ನು ಆಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಮತ್ತರ್ಧ ಭಾಗವನ್ನು ಮಾರ್ಕೆಟಿಂಗ್ ಫೆಡರೇಷನ್ನಿನವರು ಮಾತ್ರ ಗೊಬ್ಬರವನ್ನು ವಿತರಣೆ ಮಾಡುತ್ತಿದ್ದಾರೆ. ಆದರೆ ಅದನ್ನು ಹೇಗೆ ಒಬ್ಬರೇ ಒಂದು ರೀತಿಯಲ್ಲಿ ಮಾಡಬಹುದೆಂಬುದನ್ನು ಸರ್ಕಾರ ಪರಿಶೀಲನೆ ಮಾಡುತ್ತಿದೆ.

Sri B. B. SAYANAK:—May I know since when the M.S.C.M. Federation, Ltd., is earning profits ?

Sri A. SHANKARA ALVA.—It was sustaining loss in 1961-69, 1969-70 and 1970-71. Only last year, i.e., in 1971-72 it has earned a profit of Rs. 20 lakhs and odd.

ಶ್ರೀ ಕೆ. ಎಫ್. ಪಾಟೀಲ್.—ಗೊಬ್ಬರವನ್ನು ಹಂಚುವುದಕ್ಕೆ ಸರ್ಕಾರ ಬೇರೆಬೇರೆ ಏಜೆನ್ಸಿಗಳನ್ನು ಇಡುವುದಕ್ಕಿಂತ ಒಂದೇ ಏಜೆನ್ಸಿಯನ್ನು ಇಡುವುದು ಒಳ್ಳೆಯದಲ್ಲವೇ ?

ಶ್ರೀ ಎ. ಶಂಕರ ಆಳ್ವ.—ನಾನು ಮೊದಲೇ ಹೇಳಿದಹಾಗೆ ಅರ್ಧರ್ಧ ಭಾಗವನ್ನು ಅವರಿಬ್ಬರು ಹಂಚಿಕೆ ಮಾಡುತ್ತಿದ್ದಾರೆ. ಒಂದೇ ಏಜೆನ್ಸಿ ಮೂಲಕ ಗೊಬ್ಬರ ವಿತರಣೆ ಮಾಡುವ ಬಗ್ಗೆ ಸರ್ಕಾರ ಇನ್ನೂ ಯೋಚನೆ ಮಾಡುತ್ತಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಮುಂಚೆ ತ್ರಿ ಟೈರ್ ಸಿಸ್ಟಂ ಇದ್ದಾಗ ಗೊಬ್ಬರ ಚೆನ್ನಾಗಿ ವಿತರಣೆಯಾಗುತ್ತಿತ್ತು. ಬ್ಲ್ಯಾಕ್ ಮಾರ್ಕೆಟ್ಟಿಗೆ ಅವಕಾಶವಿರಲಿಲ್ಲ. ಈಗ ಎರಡು ಟೈರ್ ಸಿಸ್ಟಂ ಮಾಡಿ ಗೊಬ್ಬರ ರೈತರಿಗೆ ಸರಿಯಾಗಿ ಸಿಗುತ್ತಿಲ್ಲ. ಆದ್ದರಿಂದ ಅದನ್ನು ತಪ್ಪಿಸುವುದು ಒಳ್ಳೆಯದಲ್ಲವೇ ? ತ್ರಿ ಟೈರ್ ಸಿಸ್ಟಂ ಮಾಡುವುದರಿಂದ ರೈತರಿಗೆ ಹೆಚ್ಚು ಅನುಕೂಲವಾಗುವುದಿಲ್ಲವೇ ?

† Indicates the that remarks or speeches have not been revised by the member concerned.

ಶ್ರೀ ಎ. ಶಂಕರ ಆಳ್ವ.—ತ್ರಿ ಜ್ಯೆರ್ ಸಿಸ್ಟಂ ಮಾಡಿದರೆ ಬಹಳ ಉತ್ತಮವೆಂದು ನನಗೆ ಕಾಣುತ್ತದೆ. ಅದಕ್ಕಾಗಿ ನಾವು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್ ಮತ್ತು ಮಾರ್ಕೆಟಿಂಗ್ ಫೆಡರೇಷನ್ ಮೂಲಕ ಗೊಬ್ಬರವನ್ನು ಮಾರ್ಕೆಟ್ ಮಾಡುತ್ತಿದ್ದಾರೆ. ಎಂಬುದಾಗಿ ಹೇಳಿದರು. ಮಾರ್ಕೆಟ್ ದರ ಒಂದೇ ಜಾಗದಲ್ಲಿ ಬೇರೆಬೇರೆ ರೀತಿಯಲ್ಲಿ ಇರತಕ್ಕದ್ದು ನಕರ್ಾರದ ಗಮನಕ್ಕೆ ಬಂದಿದೆಯೇ ? ಅದನ್ನು ಸರಿಪಡಿಸುವುದಕ್ಕೆ ಏನು ಮಾಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಬೇರೆಬೇರೆ ದರವನ್ನು ಈಗಾಗಲೇ ನಿಗದಿ ಮಾಡಿದ್ದೇವೆ.

ಶ್ರೀ ಜಿ. ರಾಮೇಗೌಡ.—ದರ ಎರ್ಲಾ ಒಂದೇ ಗೊತ್ತುಮಾಡಿದ್ದರೂ ಸಹ ಕಾರ್ಪೊರೇಷನ್ನಿನವರು ಫೆಡರೇಷನ್ ಅವರಿಗಿಂತಲೂ ಕಡಿಮೆ ದರದಲ್ಲಿ ಮಾರಿ ಪೈಪೋಟಿ ಪಡೆಸುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಶಂಕರ ಆಳ್ವ.—ಇಲ್ಲ.

ಶ್ರೀ ಪಿ. ಎಂ. ಬಂಗಿ.—ಮೊದಲು ಇದರ ಲಾಭ ಕಡಿಮೆಯಾಗಿರುವುದಕ್ಕೆ ಕಾರಣವೇನು ?

ಶ್ರೀ ಎ. ಶಂಕರ ಆಳ್ವ.—ಮೊದಲು ಇಷ್ಟು ಡಿಮ್ಯಾಂಡ್ ಇರಲಿಲ್ಲ. ಈಗ ಎಲ್ಲವನ್ನೂ ಹಂಚಿಕೆ ಮಾಡಿಕೊಡುತ್ತಿದ್ದಾರೆ. ಆದರೆ 1970–71ನೇ ಮತ್ತು 1971–72ನೇ ಸಾಲಿನಲ್ಲಿ ಗೋಡೌನಿಗೆ ಭೇಟಿ ಕೊಟ್ಟಾಗ ಅಲ್ಲಿನ ವರದಿ ಪ್ರಕಾರ ಇದಕ್ಕೆ ಅಷ್ಟು ಡಿಮ್ಯಾಂಡ್ ಇಲ್ಲದೇ ಇದ್ದುದರಿಂದ ಗೋಡೌನ್ ಬಾಡಿಗೆ ಕೊಡಬೇಕಾದ್ದರಿಂದ ಲಾಭ ಕಡಿಮೆಯಾಗಿದೆ.

ಶ್ರೀ ಬಿ. ಜಿ. ಬಣಕಾರ್.—ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನಲ್ಲಿ ಹೆಚ್ಚಿಗೆ ಸ್ಟಾಫ್ ಇರುವುದರಿಂದ, ಸಹಕಾರಿ ಸಂಘಗಳ ಮೂಲಕ ಇದನ್ನು ಹಂಚುವ ಕೆಲಸವನ್ನು ಬಿಟ್ಟು ಅವರೇ ಇದರ ಪೂರಾ ಕೆಲಸ ಮಾಡುವುದಕ್ಕೆ ತಕ್ಕ ಡೈರೆಕ್ಷನ್ ಕೊಡುತ್ತೀರಾ ?

ಶ್ರೀ ಎ. ಶಂಕರ ಆಳ್ವ.—ಇದು ಉತ್ತಮವಾದಂಥ ನಲಹೆ. ಇದನ್ನು ಪರ್ಯಾಲೋಚನೆ ಮಾಡುತ್ತೇವೆ.

Repairs to Bangalore-Mysore Road

232. Sri S. KARIAPPA (Kanakapura).—

Will the Minister for Public Works and Electricity be pleased to state :—

(*a*) whether it has come to the notice of the Government that the Bangalore—Mysore road between Torekadanahalli and Harohalli has been badly damaged on account of the movement of E.C.C. heavy vehicles ;

(*b*) the step taken by Government to effect repairs to this road?

Sri H. M. CHANNABASAPPA (Minister for Public Works and Electricity).—

(*a*) Yes.

(*b*) The road is repaired to the extent funds are available.

ಶ್ರೀ ಎಸ್. ಕರಿಯಪ್ಪ.—ನನ್ನ ಪ್ರಶ್ನೆಗೆ ಉಪಪ್ರಶ್ನೆಗಳು ಏನೂ ಇಲ್ಲ.